*Sri B. D. JATTI.—I do not think it is necessary to re-investigate. Matters are correct.

ಶ್ರೀ ಎಂ. ಎಂ. ಪಾಟೀಲ್.—ನಾನು 1686 ನೆಯ ಪ್ರಶ್ನೆ ಹಾಕುವುದೇ ಇಲ್ಲ, ಸ್ವಾಮಿ.

Mr. SPEAKER.—Next question.

Maternity home to Malghana, Bagewadi Taluk.

Q.—1697. Sri S. Y. PATIL (Sindgi).—Will the Government be pleased to state :—

(*a*) whether it has come to their notice that the residents of Malghana, Bagewadi Taluk, Bijapur District, have been requesting for the sanction of a Maternity Home ;

(*b*) whether they are also aware of the fact that the residents of the above village constructed a building by "Shramdan" for the abovementioned purpose nearly five years ago ;

(*c*) whether they propose to sanction a Maternity Home for that place ?

A.—Sri K. K. HEGDE (Minister for Health).—

(*a*) No.

(*b*) Yes.

(*c*) This will be examined.

ಶ್ರೀ ಎಸ್. ವೈ. ಪಾಟೀಲ್.—(*c*) ಪ್ರಶ್ನೆಗೆ ಉತ್ತರವಾಗಿ ಪರಿಶೀಲನೆಯಾಗುವುದು ಎಂದು ಅಪ್ಪಣೆ ಕೊಡಿಸಿದ್ದೀರಿ. ಈ ಉತ್ತರ 24-3-1958ಕ್ಕೆ ಬಂದಿದೆ. ಅನಂತರ ಈಗ ಪುನಃ ಏನಾದರೂ ಪರಿಶೀಲನೆ ಆಗಿದೆಯೇ ?

ಶ್ರೀ ಕೆ. ಕೆ. ಹೆಗ್ಗಡೆ.—ವಿಚಾರ ಮಾಡಿದ್ದರಲ್ಲಿ ಅಲ್ಲಿ ಡಿಪ್ಯೂಟಿ ಕಮೀಷನರು ನಾಲ್ಕು ಬೆಡ್ಸ್ ಇರುವ ಆಸ್ಪತ್ರೆಯನ್ನು ತೆರೆಯಬೇಕೆಂದು ಶಿಫಾರಸು ಮಾಡಿದ್ದರು. ಅನಂತರ ಅಲ್ಲಿಯ ಡಿಸ್ಟ್ರಿಕ್ಟ್ ಲೋಕಲ್ ಬಾಡೀಸ್ ಹತ್ತಿರ ಕಾಂಟ್ರಿಬ್ಯೂಷನ್ ಕೊಡಲಕ್ಕೆ ಸಾಧ್ಯವೇ ಎಂದು ಕೇಳಿದ್ದಕ್ಕೆ ಸಾಧ್ಯವಿಲ್ಲ ಎಂದು ಉತ್ತರ ಬಂದದ್ದರಿಂದ ಆ ವಿಚಾರ ನಿಲ್ಲಿಸಿದೆ.

ಶ್ರೀ ಎಸ್. ವೈ. ಪಾಟೀಲ್.—ಆ ಭಾಗದಲ್ಲಿ ಹೆಂಗೆ ಆಸ್ಪತ್ರೆ ಅವಶ್ಯಕತೆ ಬಹಳವಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕೆ. ಕೆ. ಹೆಗ್ಗಡೆ.—ಅಗತ್ಯವೆಂದು ಗೊತ್ತಿದ್ದರೂ, ಲೋಕಲ್ ಬಾಡೀಸ್ ಕಾಂಟ್ರಿಬ್ಯೂಷನ್ ಕೊಟ್ಟರೆ ನಮಗೆ ತೆರೆಯಲಿಕ್ಕೆ ಸಾಮರ್ಥ್ಯವುಂಟು. ಇದಕ್ಕೆ ಬೇಕಾಗಿ ತಕ್ಕ ಖರ್ಚನ್ನು ನೋಡಿದರೆ ಸರ್ಕಾರದವರಿಗೆ ಸಾಧಾರಣವಾಗಿ 2,000 ರೂಪಾಯಿ ನಾನ್‌ರೆಕರಿಂಗ್ ಮತ್ತು 4,500 ರೂಪಾಯಿ ರೆಕರಿಂಗ್ ಖರ್ಚು ಬೀಳುತ್ತದೆ, ಎಂದು ಅಂದಾಜು ಮಾಡಿದೆ ; ಮತ್ತು ಇದು ಒಂದು ಪಾಲಿಸಿಗೆ ಸಂಬಂಧಪಟ್ಟ ವಿಷಯ. ಒಂದುಕಡೆ ಕೈಕೊಂದರೆ ಹಲವಾರು ಕಡೆಯಿಂದ ಇಂಥ ಬೇಡಿಕೆ ಬಂದೀತು ಎಂದು ಅಲ್ಲಿಗೇ ಇದನ್ನು ತಡೆದಿಟ್ಟಿದೆ.

Ex'ension to the Medical Practitioners of Privileges enjoyed under Madras Regulations.

Q.—2075. Sri B. E. RAMAIAH (Siruguppa).—

Will the Government be pleased to state :—

(*a*) whether they have received any memorandum from the medical practitioners (C.G.I.Ms. and L.I.Ms.) of integrated areas of Madras about the extension of their privileges enjoyed under the Madras Regulations of Integrated Medical Practitioners Act of XXVII of 1955 ;

(*b*) the action taken thereon ?

A.—Sri K. K. HEGDE (Minister for Health).—

(*a*) Yes.

(*b*) The question was discussed in the Health Ministers Conference held at Bangalore in the month of January 1958 and the same is now under the consideration of Government.

ಶ್ರೀ ಬಿ. ಇ. ರಾಮಯ್ಯ.—(ಎ) ಗೆ ಉತ್ತರವಾಗಿ 'Yes' ಎಂದು ಹೇಳಿದ್ದೀರಿ. (b) ಗೆ ಉತ್ತರವಾಗಿ ಹೆಲ್ತ್ ಮಿನಿಸ್ಟರ್ಸ್ ಕಾನ್ಫರೆನ್ಸ್‌ನಲ್ಲಿ ಚರ್ಚೆ ಮಾಡಲಾಯಿತು ಎಂದು ಹೇಳಿದ್ದೀರಿ. ಈಗ ತಾವು ಪರಿಶೀಲನೆ ಮಾಡಿದ್ದೀರಾ ಅಥವಾ ಇಲ್ಲವೇ ?

ಶ್ರೀ ಕೆ. ಕೆ. ಹೆಗ್ಗಡೆ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಚೆ ಒದಗಿಸಿದ್ದ ಸೌಲಭ್ಯ ಒದಗಿಸಬೇಕೆಂದು ಒಂದು ಸರ್ಕಾರದ ಆರ್ಡರ್ ಕಳುಹಿಸಿದೆ. ಅನಂತರ ಈಗ ಒಂದು ಬಿಲ್ಲನ್ನು ಕೂಡ ತಮ್ಮ ಮುಂದೆ ಇಡಲಿಕ್ಕೆ ಉಂಟು. ಅವರ ರಿಕ್ವೆಸ್ಟ್ ಕೂಡ ಕಳಿಸಿದರ್ ಮಾಡಿ ಅವರಿಗೆ ಬೇಕಾದ ಸೌಕರ್ಯ ಒದಗಿಸಬೇಕೆಂಬ ಪ್ರಶ್ನೆ ಉಂಟು. ಅದನ್ನು ಒದಗಿಸಲಿಕ್ಕೆ ಸಾಧ್ಯ, ಒದಗಿಸುತ್ತೇವೆ.

ಶ್ರೀ ಬಿ. ಇ. ರಾಮಯ್ಯ.—ಈಗ ಅವರಿಗೆ ಲೋಕಲ್ ಫಂಡ್ ಡಿಸ್ಪೆನ್ಸರಿನಲ್ಲಿ ಮಾತ್ರ ಕೆಲಸ ಮಾಡಲಿಕ್ಕೆ ಅವಕಾಶವಿದೆ. ಸರ್ಕಾರಿ ಆಸ್ಪತ್ರೆಯಲ್ಲೂ ಕೆಲಸ ಮಾಡಲಿಕ್ಕೆ ಅನುಕೂಲ ಕಲ್ಪಿಸಿಕೊಡುತ್ತೀರಾ ?

ಶ್ರೀ ಕೆ. ಕೆ. ಹೆಗ್ಗಡೆ.—ಅದನ್ನು ಪರಿಶೀಲನೆ ಮಾಡುತ್ತೇವೆ.

Cement-Concreting of B.H. Road in Tarikere Town.

Q.—2179. Sri T. R. PARAMESHWARAIAH (Tarikere).—

Will the Government be pleased to state :—